**ದಿನಾಂಕಃ 24.02.2025 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟೀ ಸವಾಲುಃ ಶ್ರೀ ಎನ್ ಎಸ್ ವಕೀಲರಿಂದಃ-

ನನಗೆ ಹೃದಯ ಶಸ್ತ್ರಚಿಕಿತ್ಸೆಯಾಗಿರುತ್ತದೆ. ದಾವಣಗೆರೆಯ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಯಾಗಿರುತ್ತದೆ. ನನಗೆ ಸುಮಾರು 21 ವರ್ಷಗಳ ಹಿಂದೆ ಸದರಿ ಶಸ್ತ್ರಚಿಕಿತ್ಸೆಯಾಗಿರುತ್ತದೆ. ಅರ್ಜಿದಾರರೊಂದಿಗೆ ನನ್ನ ಮದುವೆಯಾಗಿ ಸುಮಾರು 20 ರಿಂದ 25 ವರ್ಷಗಳಾಗಿರುತ್ತದೆ. ನನಗೆ ಮಕ್ಕಳು ಜನಿಸುವ ಪೂರ್ವದಲ್ಲೇ ಶಸ್ತ್ರಚಿಕಿತ್ಸೆಯಾಗಿರುತ್ತದೆ. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ನನಗೆ ಮದುವೆಯಾಗಿತ್ತು. ನಿಮಗೆ ಬೇರೆ ಏನು ಖಾಯಿಲೆ ಎಂಬ ಪ್ರಶ್ನೆಗೆ ಸಾಕ್ಷಿಯು ಡೆಂಗ್ಯೂ ಜ್ವರ ಬಂದಿದ್ದು ಅದರಿಂದ ನನಗೆ ಸೊಂಟದ ಸಮಸ್ಯೆಯಾಗಿರುತ್ತದೆ. ಈ ಸಂಬಂಧ ನಾನು ಹೋಲಿ ಕ್ರಾಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ. ಡೆಂಗ್ಯೂ ಜ್ವರಕ್ಕೆ ತರೀಕೆರೆಯ ಶಿವಮೂರ್ತಿ ರವರಿಂದ ಚಿಕಿತ್ಸೆ ಪಡೆದಿರುತ್ತೇನೆ. ನನಗೆ ಡೆಂಗ್ಯೂ ಜ್ವರ 6 ವರ್ಷಗಳ ಹಿಂದೆ ಬಂದಿತ್ತು. ನನಗೆ ಈಗಲೂ ಡೆಂಗ್ಯೂ ಜ್ವರ ಇದೆ. ನನಗೆ ಈಗಲೂ ಡೆಂಗ್ಯೂ ಜ್ವರ ಮತ್ತು ಸೊಂಟದ ಸಮಸ್ಯೆ ಇರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

ಅರ್ಜಿದಾರರನ್ನು ಬಿಟ್ಟು ಸುಮಾರು 20 ರಿಂದ 22 ವರ್ಷವಾಗಿರುತ್ತದೆ. ನನ್ನ ಇಬ್ಬರು ಹೆಣ್ಣು ಮಕ್ಕಳು ಅರ್ಜಿದಾರರೊಂದಿಗೆ ವಾಸವಾಗಿರುತ್ತಾರೆ ಎಂದರೆ ಸರಿ. ಅರ್ಜಿದಾರರಿಗೆ 20 ವರ್ಷಗಳಿಂದ ಜೀವನಾಂಶ ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅರ್ಜಿದಾರರೇ ನನ್ನನ್ನು ಬಿಟ್ಟು ಹೋಗಿದ್ದು ನನಗೆ ಊಟಕ್ಕೆ ಗತಿ ಇಲ್ಲಾ ಎಂದು ನುಡಿಯುತ್ತಾರೆ. ನೀವು ಹೇಗೆ ಜೀವನ ನಡೆಸುತ್ತೀರಿ ಎಂಬ ಪ್ರಶ್ನೆಗೆ ನನ್ನ ತಾಯಿ ಮತ್ತು ನೆಂಟರು ನನ್ನನ್ನು ನೋಡಿಕೊಳ್ಳುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಂದೆ 5 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ನಾನು ಅರ್ಜಿದಾರರ ವಿರುದ್ದ ಜೀವನಾಂಶ ಕೇಳಿ ತರೀಕೆರೆ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿ ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ಅರ್ಜಿಯನ್ನು ಸಲ್ಲಿಸಿದ ನಂತರ ಇತ್ತೀಚಿನ 9 ತಿಂಗಳ ಹಿಂದೆ ಸಲ್ಲಿಸಿರುತ್ತೇನೆ. ಸದರಿ ಅರ್ಜಿಯಲ್ಲಿ ಮಾಡಿರುವ ಆದೇಶದ ವಿರುದ್ದ ನಾನು ಮೇಲ್ಮನವಿ ಸಲ್ಲಿಸಿರುವುದಿಲ್ಲ.

ನನ್ನ ತಂದೆ ತಾಯಿಗಳಿಗೆ ಒಟ್ಟು 2 ಗಂಡು ಮತ್ತು ಒಂದು ಹೆಣ್ಣು ಮಗಳು ಇರುತ್ತಾರೆ ಅವರ ಪೈಕಿ ನನ್ನ ತಮ್ಮ ಮರಣ ಹೊಂದಿರುತ್ತಾನೆ. ನನ್ನ ಸಹೋದರಿಯರನ್ನು ಅರ್ಜಿದಾರರ ಅಣ್ಣನಿಗೆ ಮದುವೆ ಮಾಡಿಕೊಟ್ಟಿರುತ್ತೇವೆ. ನಾನು ಎಷ್ಟು ಹಣ ಜೀವನಾಂಶ ಕೇಳಿ ಅರ್ಜಿ ಸಲ್ಲಿಸಿರುತ್ತೇನೆ ಎಂದು ನನಗೆ ಗೊತ್ತಿಲ್ಲ. ಅರ್ಜಿದಾರರು ನನ್ನನ್ನು ಬಿಟ್ಟು ಹೋದ ನಂತರ ನನಗೂ ಅವರಿಗೂ ಸಂಪರ್ಕ ಇಲ್ಲಾ ಎಂದರೆ ಸಾಕ್ಷಿಯು ಪಂಚಾಯ್ತಿ ಮಾಡಿದರೂ ಸಹ ಅರ್ಜಿದಾರರು ಬರಲಿಲ್ಲಿ ಎಂದು ನುಡಿಯುತ್ತಾರೆ. 2 ನೇ ಅರ್ಜಿದಾರರ ವಿದ್ಯಾಭ್ಯಾಸದ ಖರ್ಚನ್ನು ನಾನೇ ಭರಿಸಿರುತ್ತೇನೆ, ಈ ಸಂಬಂಧ ನನ್ನ ಬಳಿ ದಾಖಲೆ ಇರುತ್ತದೆ. 2 ನೇ ಅರ್ಜಿದಾರರನ್ನು ನೀವು ಯಾವ ಶಾಲೆಯಲ್ಲಿ ಓದಿಸಿರುತ್ತೀರಿ ಎಂದರೆ ಸಾಕ್ಷಿಯು ನಮ್ಮ ಊರಿನ ಶಾಲೆಯಲ್ಲಿ ಓದಿಸಿರುತ್ತೇನೆ, ನಂತರ ಎಲ್ಲಿ ಓದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಹಾಗೂ ಅದರ

ಖರ್ಚನ್ನು ನಾನು ಭರಿಸಿರುವುದಿಲ್ಲ. ಅರ್ಜಿದಾರರಿಗೆ ಆಹಾರ, ಶಿಕ್ಷಣ ಮತ್ತು ವೈದ್ಯಕೀಯ ಚಿಕಿತ್ಸೆಗೆ ಜೀವನಾಂಶ ನೀಡಿರುತ್ತೀರಾ ಎಂದರೆ ಸಾಕ್ಷಿಯು ನನ್ನ ಬಳಿ ಹಣ ಇರಲಿಲ್ಲ ಎಂದು ನುಡಿಯುತ್ತಾರೆ.

ದೊಡ್ಡಬೋಕಿಕೆರೆಯಲ್ಲಿ ನನ್ನ ತಂದೆ ಹೆಸರಿನಲ್ಲಿ ಮನೆ ಇರುತ್ತದೆ ಎಂದರೆ ಸರಿ. ನನ್ನ ಅಜ್ಜನ ( ತಂದೆಯ ತಂದೆ ) ಹೆಸರು ಗಿರಿಯಪ್ಪ ಅಲಿಯಾಸ್ ಗಿರಿಯಣ್ಣ ಎಂದರೆ ಸರಿ. ಗಿರಿಯಪ್ಪನ ತಂದೆ ಹೆಸರು ಕುರುಡು ರಂಗಣ್ಣ ಅಲಿಯಾಸ್ ರಂಗಪ್ಪ ಎಂದರೆ ಗೊತ್ತಿಲ್ಲ. ನನ್ನ ಅಜ್ಜ ಗಿರಿಯಪ್ಪನ ಹೆಸರಿನಲ್ಲಿ ಅಮೃತಾಪುರ ಹೋಬಳಿ, ಕೆ ಗೊಲ್ಲರಹಳ್ಳಿ ಗ್ರಾಮದ ಸರ್ವೆ ನಂ 13ಃ2 ಬಿ ರಲ್ಲಿ 14 ಗುಂಟೆ ಆಸ್ತಿ, 19ಃ2 ಎರಲ್ಲಿ 37 ಗುಂಟೆ, 59ಃಎ ರಲ್ಲಿ 4 ಎಕರೆ 16 ಗುಂಟೆ ಆಸ್ತಿ ಇದೆ ಎಂದರೆ ಸದರಿ ಜಮೀನು ವಿಭಾಗವಾಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಭಾಗದಲ್ಲಿ ನನಗೆ ಹಿಸ್ಸೆ ನೀಡಿರುವುದಿಲ್ಲ. ಸದರಿ ಸ್ವತ್ತು ನನ್ನ ಹೆಸರಿನಲ್ಲಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಅಂಗನವಾಡಿ ಕಾರ್ಯಕರ್ತರಾಗಿದ್ದು ಅವರಿಗೆ ಸಂಬಳ ಬರುವುದಿಲ್ಲ ಗೌರವ ಧನ ಬರುತ್ತದೆ ಎಂದರೆ ಸರಿ, ಸಾಕ್ಷಿ ನಾನೇ ಅವರನ್ನು ಕೆಲಸಕ್ಕೆ ಸೇರಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿಆರ್-1 ರಲ್ಲಿ ಗೌರವಧನ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿರ್-2 ರಿಂದ 6 ರ ದಾಖಲೆಗಳು ಯಾರ ಹೆಸರಿನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ಅದು ಅರ್ಜಿದಾರರ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಜಮೀನುಗಳನ್ನು ನೀವು ಕೊಟ್ಟಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ನನ್ನ ಅಕ್ಕನ ಮನೆಯಿಂದ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನಿಆರ್-2 ರಿಂದ 6 ರ ಆಸ್ತಿಗಳು ಅರ್ಜಿದಾರರ ತವರು ಮನೆ ಆಸ್ತಿಗಳು ಎಂದರೆ ಸರಿ.

ತರೀಕೆರೆಯ ಹಿರಿಯ ಸಿವಿಲ್ ನ್ಯಾಯಾಲಯದ ಎಂ ಸಿ 21ಃ2023 ರ ಅರ್ಜಿ ವಜಾ ಗೊಂಡಿರುತ್ತದೆ ಎಂದರೆ ಸರಿಯಲ್ಲ. ಸದರಿ ಅರ್ಜಿಯು ಚಾಲ್ತಿಯಲ್ಲಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆಯನ್ನು ಹಾಜರುಪಡಿಸಬಲ್ಲೆ. ನಿಆರ್-10 ನ್ನು ನಾನೇ ಪಡೆದಿರುತ್ತೇನೆ. ನಿಆರ್-10 ನ್ನು ಯಾರು ನೀಡಿರುತ್ತಾರೆ ಮತ್ತು ಯಾರು ಅರ್ಜಿ ಸಲ್ಲಿಸಿರುತ್ತಾರೆ ಎಂದು ನಮೂದು ಇಲ್ಲಾ ಎಂದರೆ ಸರಿಯಲ್ಲ. ನಿಆರ್-11 ರ ಮರಣ ಪ್ರಮಾಣಪತ್ರದಲ್ಲಿ ನನ್ನ ತಂದೆ ಹೆಸರು ಗಿರಿಯಪ್ಪ ಎಂದು ನಮೂದು ಇರುತ್ತದೆ ಎಂದರೆ ಸರಿ. ನನ್ನ ತಾಯಿ ಹೆಸರು ಪುಟ್ಟಮ್ಮ ಎಂದರೆ ಸರಿ. ನನಗೆ ದಾವಣಗೆರೆ ಆಸ್ಪತ್ರೆಯಲ್ಲಿ ಹೃದಯ ಶಸ್ತ್ರಚಿಕಿತ್ಸೆಯಾಗಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನಾನು ಹೋಲಿ ಕ್ರಾಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ರೀತಿಯ ಶಸ್ತ್ರಚಿಕಿತ್ಸೆಯಾಗಿಲ್ಲ ಮತ್ತು ಹೋಲಿ ಕ್ರಾಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿಲ್ಲ ಎಂದರೆ ಸರಿಯಲ್ಲ. ಡೆಂಗ್ಯೂ ಜ್ವರ ಶಾಶ್ವತ ಖಾಯಿಲೆ ಅಲ್ಲಾ ಎಂದರೆ ಸಾಕ್ಷಿಯು ಅದು ಒಂದು ವರ್ಷ ಅಥವಾ 6 ತಿಂಗಳುಗಳ ಇರುತ್ತದೆ ಎಂದು ನುಡಿಯುತ್ತಾರೆ.

ನಾನು ದಿಃ 01.05.2020 ರಲ್ಲಿ ನಿಆರ್-12 ರಿಂದ 21 ರಂತೆ ಡೆಂಗ್ಯೂ ಜ್ವರಕ್ಕೆ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ. ಡೆಂಗ್ಯೂ ಜ್ವರಕ್ಕೆ ಸರ್ಕಾರಿ ಆಸ್ಪತ್ರೆಯಲ್ಲಿ ಉಚಿತವಾಗಿ ಚಿಕಿತ್ಸೆ ನೀಡುತ್ತಾರೆ ಎಂದರೆ ಸರಿ. ನಿಆರ್-17 ರಂತೆ ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಡೆಂಗ್ಯೂ ಜ್ವರಕ್ಕೆ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿ.

ಪ್ರಶ್ನೆಃ ನೀವು ಕೊನೆಯದಾಗಿ ಯಾವಾಗ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೀರಿ.

ಸಾಕ್ಷಿಃ ನಾನು ಮರೆತು ಹೋಗಿರುತ್ತೇನೆ.

ನಾನು ತರೀಕೆರೆಯ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸುವ ಪೂರ್ವದಲ್ಲಿ ಆಸ್ಪತ್ರೆಗೆ ಹೋಗಿರುತ್ತೇನೋ ಅಥವಾ ನಂತರ ಹೋಗಿರುತ್ತೇನೋ ನನಗೆ ನೆನಪಿಲ್ಲ. ನಾನು ತರೀಕೆರೆಯ ಸರ್ಕಾರಿ ಆಸ್ಪತ್ರೆ ಹಾಗೂ ಬೀರೂರು ಸರ್ಕಾರಿ ಅಸ್ಪತ್ರೆಯಲ್ಲಿ ಜ್ವರಕ್ಕೆ ಚಿಕಿತ್ಸೆ ಪಡೆದಿರುತ್ತೇನೆ. ನಾನು ತರೀಕೆರೆ ಮತ್ತು ಬೀರೂರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವ ಬಗ್ಗೆ ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ತರೀಕೆರೆ ಮತ್ತು ಬೀರೂರು ಆಸ್ಪತ್ರೆಯನ್ನು ಬಿಟ್ಟು ಬೇರೆ ಎಲ್ಲೂ ಚಿಕಿತ್ಸೆ ಪಡೆದಿಲ್ಲ ಎಂದರೆ ಸಾಕ್ಷಿಯು ಅಜ್ಜಂಪುರ ಮತ್ತು ಹೋಲಿ ಕ್ರಾಸ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಗಳಲ್ಲಿ ನೀಡಿರುವ ಕೇಸ್ ಶೀಟು ಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಆರ್-22 ರಿಂದ 41 ರ ದಾಖಲೆಗಳನ್ನು ಈ ಪ್ರಕರಣದ ಸಲುವಾಗಿ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ತೀವ್ರವಾದ ಯಾವುದೇ ಖಾಯಿಲೆ ಇಲ್ಲದಿದ್ದರೂ ಸಹ ಜೀವನಾಂಶ ನೀಡುವುದನ್ನು ತಪ್ಪಿಸಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದರಿಂದ ಮುಂದೂಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.